# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಡಿ.ಎಸ್ ಅರುಣ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1025

ಉತ್ತರಿಸಬೇಕಾದ ದಿನಾಂಕ : 27.12.2022

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ವಿಜಯನಗರ ಜಿಲ್ಲೆ ಹೊಸಪೇಟೆ ನಗರದಲ್ಲಿರುವ ಅಹನಾ ಸೌಹಾರ್ದ ಕ್ರೆಡಿಟ್ ಕೋ-ಆಪ್‌ರೇಟಿವ್ ಸೊಸೈಟಿಯಲ್ಲಿ ಠೇವಣಿ ಹಣ ದುರುಪಯೋಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಠೇವಣಿ ಹಣ ದುರುಪಯೋಗಕ್ಕೆ ಕಾರಣರಾದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು: | ಅಹನಾ ಸೌಹಾರ್ದ ಕ್ರೆಡಿಟ್ ಕೋ-ಆಪ್‌ರೇಟಿವ್ ಸೊಸೈಟಿಯಲ್ಲಿ ಠೇವಣಿ ಹಣ ದುರುಪಯೋಗಕ್ಕೆ ಕಾರಣರಾದವರ ಮೇಲೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.<br>• ಆದೇಶ ಸಂ: ಇ-ಆರ್‌ಡಿ: 82: ಜಿಆರ್‌ಸಿ: 2022 ದಿನಾಂಕ: 28-06-2022ರ ಆದೇಶದನ್ವಯ ಶ್ರೀ ಸುಬ್ರಮಣ್ಯ ಕೆ., ಉಪ ವಿಭಾಗಾಧಿಕಾರಿಗಳು, ಬೆಂಗಳೂರು ಇವರನ್ನು "ಸಕ್ಷಮ ಪ್ರಾಧಿಕಾರವಾಗಿ" ನೇಮಕ ಮಾಡಿ ಸರ್ಕಾರವು ಆದೇಶಿಸಿರುತ್ತದೆ.<br>• ಸಹಕಾರಿಯ ಆಡಳಿತ ಮಂಡಲಿ ಸದಸ್ಯರುಗಳು ಅಧಿಕಾರ ದುರುಪಯೋಗ ಪಡಿಸಿಕೊಂಡು ಠೇವಣಿದಾರರಿಗೆ ಮೋಸ/ ವಂಚನೆ ಎಸಗಿರುವುದರಿಂದ ಹಾಗೂ ಪರಿವೀಕ್ಷಣೆ ಸಂದರ್ಭದಲ್ಲಿ ಸಹಕಾರಿಯಲ್ಲಿನ ಕಾರ್ಯ ಚಟುವಟಿಕೆಗಳು ಅನುಮಾನಾಸ್ಪದವಾಗಿ ಕಂಡು ಬಂದು, ಗಂಭೀರ ಹಣಕಾಸು ಅಕ್ರಮಗಳನ್ನು ಮತ್ತು ವಂಚನೆಯನ್ನು ಎಸಗಿರುವುದರಿಂದ ಸಂಯುಕ್ತ ಸೌಹಾರ್ದ ಸಹಕಾರಿಯಿಂದ, ಸೌಹಾರ್ದ ಕಾಯ್ದೆಯನುಸಾರ ಸಹಕಾರಿಯ ಆಡಳಿತ ಮಂಡಲಿ ಸದಸ್ಯರಿಗೆ ಕಾರಣ ಕೇಳಿ ನೋಟೀಸ್ ನೀಡಿ ದಿನಾಂಕ; 21-10-2021 ರಂದು ನಿರ್ದೇಶಕ ಸ್ಥಾನದಿಂದ ಅನರ್ಹಗೊಳಿಸಿ ಶ್ರೀ ಆರ್.ಬಸವರಾಜ್, ಮುಖ್ಯ ಕಾರ್ಯನಿರ್ವಾಹಕರು (ನಿವೃತ್ತ), ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ನಿ., ಇವರನ್ನು ವಿಶೇಷಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಸಹಕಾರಿಯ ಠೇವಣಿದಾರರ ಹಣ ದುರುಪಯೋಗ |

| | | |
|---|---|---|
| | | ಮಾಡಿಕೊಂಡ ಆಪಾದಿತರ ಮೇಲೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿ ಸಭೆಯ ನಿರ್ಣಯದಂತೆ ದಿನಾಂಕ 30.04.2021 ರಂದು ಹೊಸಪೇಟೆ ಪೋಲಿಸ್ ಠಾಣೆಯಲ್ಲಿ ಸಹಕಾರಿಯ ಹಾಲಿ ಮತ್ತು ಮಾಜಿ ಆಡಳಿತ ಮಂಡಲಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕರ ವಿರುದ್ಧ (ಒಟ್ಟು 23 ಜನ) ಕ್ರಿಮಿನಲ್ ಪ್ರಕರಣ ದಾಖಲಿಸಿದೆ. (ಎಫ್ ಐ.ಆರ್ ಸಂಖ್ಯೆ 0026/2021) ಪ್ರಸ್ತುತ ತನಿಖಾಧಿಕಾರಿಗಳು ವಿಚಾರಣೆಯನ್ನು ಕೈಗೊಂಡಿರುತ್ತಾರೆ. |
| ಇ) | ಠೇವಣಿದಾರರ ಹಿತ ಕಾಪಾಡಲು ಸರ್ಕಾರ ಮುಂದಾಗುವುದೇ? | ಠೇವಣಿದಾರರ ಹಿತ ಕಾಪಾಡಲು ಸರ್ಕಾರ/ಸಂಯುಕ್ತ ಸಹಕಾರಿಯಿಂದ ಈಗಾಗಲೇ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>ಸಹಕಾರಿಯ ಠೇವಣಿದಾರರಿಗೆ ವಂಚನೆಗಳನ್ನು ಎಸಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ಸಂಯುಕ್ತ ಸಹಕಾರಿಯು ಸೌಹಾರ್ದ ಸಹಕಾರ ಕಾಯ್ದೆ ಕಲಂ 37 ಎ ರನ್ವಯ ಸಹಕಾರಿಯ ಆಡಳಿತ ಮಂಡಲಿ ಎಲ್ಲಾ ಸದಸ್ಯರು ಮತ್ತು ಮುಖ್ಯ ಕಾರ್ಯನಿರ್ವಾಹಕರ ವಿರುದ್ಧ ಅಧಿಭಾರ (ಸರ್ಚಾರ್ಜ್) ಪ್ರಕರಣವನ್ನು ಸಹಕಾರ ಸಂಘಗಳ ಉಪ ನಿಬಂಧಕರು, ನಿಯಮ 441 ದಾವಾ ಪಂಚಾಯತ್ ನ್ಯಾಯಾಲಯ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮಲ್ಲೇಶ್ವರಂ ಬೆಂಗಳೂರು ಇಲ್ಲಿ ದಾಖಲು ಮಾಡಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 44 ರಡಿ ಸಹಕಾರಿಯ 11 ನಿರ್ದೇಶಕರುಗಳಿಗೆ ಸಂಬಂಧಿಸಿದ ಒಟ್ಟು 29 ಸ್ಥಿರಾಸ್ತಿಗಳನ್ನು ಆದೇಶ ಪೂರ್ವ ಜಪ್ತಿಗೆ (ಎಬಿಜೆ) ಒಳಪಡಿಸಿ ತೀರ್ಪನ್ನು ಪಡೆದಿರುತ್ತದೆ. (ವಾಜ್ಯ ಸಂಖ್ಯೆ: ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/04(37ಎ)/ 2021-22.)<br><br>ಸಕ್ಷಮ ಪ್ರಾಧಿಕಾರಿಗಳಾದ ಉಪ ವಿಭಾಗಾಧಿಕಾರಿಗಳಾದ ಶ್ರೀ ಸುಬ್ರಮಣ್ಯ ಕೆ., ರವರು ಸೌಹಾರ್ದ ಸಹಕಾರಿಗೆ ದಿನಾಂಕ: 7-7-2022 ರಂದು ಪತ್ರ ಬರೆದು ಸೌಹಾರ್ದ ಸಹಕಾರಿಯ ಹಾಗೂ ಠೇವಣಿದಾರರ ವಿವರಗಳನ್ನು ಕೋರಿದ್ದು, ಅದರಂತೆ ಸೌಹಾರ್ದ ಸಹಕಾರಿಯ ಪತ್ರ ದಿನಾಂಕ: 4-8-2022 ರನ್ವಯ ಕೋರಿದ ಮಾಹಿತಿಯನ್ನು ಒದಗಿಸಿದ್ದು, ಠೇವಣಿದಾರರಿಗೆ ಠೇವಣಿ ಮೊತ್ತವನ್ನು ಹಿಂದಿರುಗಿಸುವ ಕ್ರಮ ಜಾರಿಯಲ್ಲಿರುತ್ತದೆ. |

**ಕಡತ ಸಂಖ್ಯೆ: ಸಿಒ 117 ಸಿಆರ್‌ಸಿ 2022**

**(ಎಸ್. ಟಿ. ಸೋಮಶೇಖರ್)**

**ಸಹಕಾರ ಸಚಿವರು**